Cement Factory near Honnali. (Steps to start.)

Q.—660—Sri B. MADHAVACHAR (Bhadravati).—

Will the Government be pleased to state :—

Whether they have received any representation to examine the possibilities of starting a Cement Factory near Honnali ?

A—Dr. R. NAGAN GOWDA (Minister for Industries and Excise).—

Yes.

ಶ್ರೀ ಬಿ. ಮಾಧವಾಚಾರ್.—ತಮಗೆ ಈ ಮನವಿ ಬಂದ ಮೇಲೆ ತಾವೇನು ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ ?

*ಡಾ॥ ಆರ್. ನಾಗನಗೌಡ.—ಈ ವಿಚಾರದಲ್ಲಿ ಹೊನ್ನಾಳಿ ತಾಲ್ಲೂಕಿನಲ್ಲಿ ಸರಿಯಾದಂಥ ಲೈಂಸ್ಟೋನ್ ಗಣಿಗಳು ಎಷ್ಟಿರುತ್ತವೆಂದು ಕೇಳಿದ್ದುದಕ್ಕೆ ಕೇವಲ ಕೆಲವೇ ಕೆಲವು ಇರುತ್ತವೆಂದು ನಮಗೆ ತಿಳಿದು ಬಂದಿದೆ. ನಮಗೆ ಈ ಫ್ಯಾಕ್ಟರಿ ಹಾಕಲು ಎಷ್ಟು ಪ್ರಮಾಣದ ಲೈಂಸ್ಟೋನ್ ಬೇಕಾಗುತ್ತದೆಂಬುದರ ಬಗ್ಗೆ ಒಂದು ವರದಿಯನ್ನು ಕೇಳಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಹಾಗಾದರೆ ಆ ಹೊನ್ನಾಳಿ ತಾಲ್ಲೂಕಿನಲ್ಲಿ ಸಾಕಷ್ಟು ಲೈಂಸ್ಟೋನ್ ಇಲ್ಲವೆಂದು ಹೇಳುತ್ತೀರಾ ?

*ಡಾ॥ ಆರ್. ನಾಗನಗೌಡ.—ಹೊನ್ನಾಳಿ ತಾಲ್ಲೂಕಿನಲ್ಲಿ ಕೆಲವು ಕಡೆ ಈ ವಸ್ತು ದೊರೆಯುತ್ತದೆ. ಅಲ್ಲದೆ ಆಜುಬಾಜು ಪ್ರದೇಶಗಳಲ್ಲಿ ಎಂದರೆ ಕುಂಸಿ, ಬಿಕ್ಕೋನಹಳ್ಳಿ, ಜೋಳದಹಾಳ್ ಇತ್ಯಾದಿ ಕೆಲವು ಸ್ಥಳಗಳಲ್ಲೂ ದೊರೆಯುವುದಾಗಿ ವರದಿಯಲ್ಲಿ ನೂಚಿಸಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಹೊನ್ನಾಳಿಗೆ ಸಮೀಪದಲ್ಲಿರುವ ಹೀರೆಕೆರೂರು ತಾಲ್ಲೂಕು ಧಾರವಾಡ ಜಿಲ್ಲೆಯ ಈ ಸ್ಥಳದಲ್ಲಿ ಹೇರಳವಾಗಿ ಆ ಸಾಮಾನು ದೊರೆಯುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ —ನವೆಂಬರು ತಿಂಗಳು ಕಳೆದ ತರುವಾಯ ಆ ವಿಚಾರವನ್ನು ಪರ್ಯಾಲೋಚನೆ ಮಾಡಿ ನೋಡುತ್ತೇವೆ.

Sugar Factory at Maddur (Steps taken to start)

Q.—694. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that there have been a number of representations before Government to start a sugar factory at Maddur;

(*b*) whether it is not a fact that an Hon'ble Minister had called for a special meeting at Maddur to get the opinion of the Members and statistics to start a sugar factory;

(*c*) the further action taken in the matter ?

A.—Dr. R. NAGAN GOWDA (Minister for Industries and Excise).—

(*a*) Yes.

(*b*) Yes.

(*c*) After considering the acreage of cane area in the locality which is not adequate for the purpose and in view of the fact that a factory is already coming up at Pandavapura on co-operative auspices, Government have decided to defer consideration of the matter till the Pandavapura Factory gets going.

ಶ್ರೀ ಎಂ. ಚಿಕ್ಕಲಿಂಗಯ್ಯ.—ಜಮೀನು ಸಾಲದೆಂಬ ಕಾರಣದ ಮೇಲೆ ಈ ವಿಚಾರವನ್ನು ಮುಂದಕ್ಕೆ ಹಾಕಲಾಗಿದೆ ಎಂದು ತಿಳಿಸೋಣವಾಗಿದೆ. ಎಷ್ಟು ಎಕರೆ ಕಬ್ಬು ಬೆಳೆಯುವ ಪ್ರದೇಶವಿದ್ದರೆ ತಾವು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ಕೊಡುತ್ತೀರಿ?

*ಡಾ॥ ಆರ್. ನಾಗನಗೌಡ.—ಅದರ ವಿಚಾರ ತಮಗೇ ಗೊತ್ತಿದೆ. ಒಂದು ದಿವನಕ್ಕೆ ಸುಮಾರು ಒಂದು ಸಾವಿರದ್ನೂರು ಟಿಕ್ ಮೇಲೆ ಕ್ರಷ್ ಮಾಡಲು ಅವಕಾಶವಿರಬೇಕು. 20 ದಿವಸಗಳು ಕಾರ್ಖಾನೆ ಕೆಲಸ ಮಾಡಲು ಸುಮಾರು ಎರಡು ಲಕ್ಷ ಟಿಕ್‌ಗಳಿಗೆ ಮೇಲ್ಪಟ್ಟು ಕಬ್ಬಿನ ಸರಬರಾಯಿ ಆಗಬೇಕು. ಅಷ್ಟು ಪ್ರಮಾಣದಲ್ಲಿ ಕಬ್ಬನ್ನು ಬೆಳೆಯತಕ್ಕ ಪ್ರದೇಶವಿರಬೇಕಾದದ್ದು ಅಗತ್ಯ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮದ್ದೂರು, ಮಂಡ್ಯ, ಚನ್ನಪಟ್ಟಣ ಮತ್ತು ಪಾಂಡವಪುರ ಈ ನಾಲ್ಕು ತಾಲ್ಲೂಕುಗಳಲ್ಲೂ ಸುಮಾರು 10 ಸಾವಿರ ಎಕರೆಗಳಿಗಿಂತಲೂ ಹೆಚ್ಚು ಪ್ರದೇಶದಲ್ಲಿ ಕಬ್ಬನ್ನು ಬೆಳೆಯುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಆ ವಿಚಾರ ಗೊತ್ತಿದೆ. ಆದರೆ ಮದ್ದೂರು ಮತ್ತು ಚನ್ನಪಟ್ಟಣ ಮುಳವಳ್ಳಿ ತಾಲ್ಲೂಕುಗಳಲ್ಲಿ ಚೈರ್ ಎಂಡ್ ಆಫ್ ದಿ ಕೆನಾಲ್‌ನ ಜಮೀನುಗಳಿಗೆ ನೀರು ಸರಬರಾಯಿ ಆಗತಕ್ಕ ವಿಚಾರದಲ್ಲಿ ಬಹಳ ಅನುಮಾನವಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪ್ರತಿ ದಿನವೂ ಈ ಸ್ಥಳಗಳಿಂದ ಸಾವಿರಾರು ಟಿಕ್ ಕಬ್ಬು ಮಂಡ್ಯ ಕಾರ್ಖಾನೆಗೆ ಸರಬರಾಯಿಯಾಗುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಈಗ ಸುಮಾರು ಆ ಕಬ್ಬು ಬೆಳೆಯುವ ಪ್ರದೇಶ ಸುಮಾರು ಒಂದು ಸಾವಿರದ ನೂರಹದಿನೈದು ಎಕರೆಗಳೆಂದು ತಿಳಿದು ಬಂದಿದೆ. ಮತ್ತೊಂದು ಕಾರ್ಖಾನೆಯನ್ನು ಪ್ರಾರಂಭಿಸಬೇಕಾಗಿದ್ದರೆ ಕನಿಷ್ಟ ಪಕ್ಷ 15—16 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬಿನ ಬೆಳೆ ಇರಬೇಕಾಗುತ್ತದೆ. ಈಗ ಇರತಕ್ಕ ಒಟ್ಟು ಪ್ರದೇಶ ಕಬ್ಬು ಬೆಳೆಯುವುದು 10 ವರ್ಷಗಳ ದಾಮಾಷಾ ಪ್ರಕಾರ ನೋಡಿದಲ್ಲಿ ಮಂಡ್ಯ-ಮದ್ದೂರು ಪಾಂಡವಪುರ ಇತ್ಯಾದಿ ಸ್ಥಳಗಳಲ್ಲಿ ಕೇವಲ 16 ಸಾವಿರ ಎಕರೆಗಳೆಂದು ಗೊತ್ತಾಗಿದೆ. ಇಷ್ಟು ಪ್ರದೇಶದಲ್ಲಿ ಬೆಳೆಯುವ ಕಬ್ಬಿಗೋಸ್ಕರ